# ಹಳ್ಳಿಯಾದರೇನು ಶಿವ...

ಹುಡುಗರ ಜೊತೆಗೆ 'ತರ್ಲೆ' ಎನ್ನುವ ವಿಶೇಷಣವನ್ನು ಸೇರಿಸುವುದು ರೂಢಿ. ಆದರೆ, ನಿರ್ದೇಶಕ ಕೆ.ಎಂ. ರಘು ಇಡೀ ಊರಿಗೇ 'ತರ್ಲೆ' ಬೋರ್ಡ್ ತಗುಲಿಸಿದ್ದಾರೆ. ಅವರ ನಿರ್ದೇಶನದ 'ತರ್ಲೆ ವಿಲೇಜ್' ಈಗ ತೆರೆಕಾಣಲು ಸಿದ್ಧವಾಗಿರುವ ಸಿನಿಮಾ.

'ತರ್ಲೆ ವಿಲೇಜ್' ಹಳ್ಳಿಯೊಂದರ ಜೀವಂತಿಕೆಯನ್ನು ಅನಾವರಣಗೊಳಿಸುವ ಪ್ರಯತ್ನ. ಗ್ರಾಮೀಣರ ತವಕತಲ್ಲಣಗಳು, ಪ್ರೇಮ, ವಿರಸ, ಗದ್ದಲ, ಮೌನ, ತಮಾಷೆ, ಮುನಿಸು, ಪೋಲಿತನ – ಮುಂತಾದುವೆಲ್ಲವೂ ಈ ಚಿತ್ರದಲ್ಲಿ ಪಾತ್ರಗಳಾಗಿ ರೂಪುಗೊಂಡಿವೆ. ರಘು ಅವರ ಪಾಲಿಗಿದು ಗೆಲ್ಲಲೇಬೇಕಾದ ಸಿನಿಮಾ. ತಾವು ಇಷ್ಟಪಟ್ಟು ರೂಪಿಸಿದ ಹಳ್ಳಿ ಮತ್ತು ಹಳ್ಳಿಮಂದಿಯನ್ನು ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಾರೆ ಎನ್ನುವುದು ಅವರ ನಂಬಿಕೆ.

ರಾಮ್ ರೆಡ್ಡಿ ನಿರ್ದೇಶನದ 'ತಿಥಿ' ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ಕನ್ನಡ ಸಿನಿಮಾ. ಈ ಚಿತ್ರದ ಬಹುತೇಕ ತಾರಾಗಣವನ್ನು ರಘು ಅವರು ಹೈಜಾಕ್ ಮಾಡಿದ್ದು, 'ತರ್ಲೆ ವಿಲೇಜ್'ನಲ್ಲಿ ಇರಿಸಿದ್ದಾರೆ. ಸೆಂಚುರಿ ಗೌಡ ಮತ್ತು ಗಡ್ಡಪ್ಪ ಈ ಚಿತ್ರದಲ್ಲೂ ಇದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಟ್ರೈಲರ್‌ನಲ್ಲಿನ ಇಬ್ಬರ ಪೋಲಿ ಮಾತುಗಳು ತುಂಟಹುಡುಗರ ಕುತೂಹಲ ಕೆರಳಿಸಿವೆ.



ತಮ್ಮಣ್ಣ, ಅಭಿ, ಹರ್ಷಿತಾ, ಸೋಮು, ಭಾಗ್ಯಶ್ರೀ ಸೇರಿದಂತೆ ಸುಮಾರು ಎಪ್ಪತ್ತು ಕಲಾವಿದರು ಹಳ್ಳಿ ಬಳಗದಲ್ಲಿದ್ದಾರೆ.

ಗಡ್ಡಪ್ಪ ಊರ ಯಜಮಾನನ ಪಾತ್ರದಲ್ಲಿದ್ದರೆ, ತಮ್ಮಣ್ಣ ಜಾನುವಾರುಗಳ ಮಾರಾಟದ ದಲ್ಲಾಳಿಯ ಪಾತ್ರದಲ್ಲಿ ನಟಿಸಿದ್ದಾರೆ. ಮೈಸೂರಿನ ಸಮೀಪ ಹಳ್ಳಿಯ ಸೆಟ್ ಹಾಕಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ವೀರ್ ಸಮರ್ಥ್ ಸಂಗೀತ ಚಿತ್ರಕ್ಕಿದೆ. ಸದ್ಯದ ನೋಟಿನ ರಗಳೆ ಶಮನಗೊಂಡ ನಂತರ, 2017ರ ಆರಂಭಿಕ ಚಿತ್ರಗಳಲ್ಲೊಂದಾಗಿ 'ತರ್ಲೆ ವಿಲೇಜ್' ತೆರೆ ಕಾಣಲಿದೆ.



# 'ಕಾಫಿ ತೋಟ'ದಲ್ಲಿ ರಾಧಿಕಾ!

'ರಂಗಿತರಂಗ' ಚಿತ್ರದ ಖ್ಯಾತಿಯ ರಾಧಿಕಾ ಚೇತನ್ ವಿಶಿಷ್ಟ ಪಾತ್ರಗಳ ಮೂಲಕ ಗಮನಸೆಳೆಯುತ್ತಿರುವ ಪ್ರತಿಭಾವಂತ ನಟಿ. ಮೊದಲ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ ರಾಧಿಕಾ, ಎರಡನೇ ಚಿತ್ರ 'ಯು ಟರ್ನ್'ನಲ್ಲಿ ಪೋಷಿಸಿದ್ದು ಪುಟ್ಟ ಪಾತ್ರವೊಂದನ್ನು. ಆದರೆ, ಆ ಪುಟ್ಟ ಪಾತ್ರದ ಮೂಲಕವೇ ಅವರು ಪ್ರೇಕ್ಷಕರನ್ನು ಆವರಿಸಿಕೊಂಡಿದ್ದರು. ಮುಂದೇನು ಎನ್ನುವಾಗ – 'ನೆವರ್ ಎಂಡ್' ಎನ್ನುವ ಕಿರುಚಿತ್ರದಲ್ಲಿ ನಟಿಸುತ್ತಿದ್ದೇನೆ ಎಂದರು. ಇದೀಗ ಕಾಫಿ ತೋಟದಲ್ಲಿ ಸುಳಿದಾಡುತ್ತಿದ್ದಾರೆ.

'ಕಾಫಿ ತೋಟ' ಟಿ.ಎನ್. ಸೀತಾರಾಮ್ ನಿರ್ದೇಶಿಸುತ್ತಿರುವ ಸಿನಿಮಾ. ಕಳೆದ ವಾರ ಮುಹೂರ್ತ ನಡೆಸಿದ ಈ ಸಿನಿಮಾದಲ್ಲಿ ರಾಧಿಕಾ ಅವರಿಗೆ ವಿಶಿಷ್ಟ ಪಾತ್ರವಿದೆಯಂತೆ. ಸ್ತ್ರೀಪಾತ್ರಗಳನ್ನು ರೂಪಿಸುವಲ್ಲಿ ಸೀತಾರಾಮ್ ಸಿದ್ಧಹಸ್ತರು. ಹಾಗಾಗಿ, 'ಕಾಫಿ ತೋಟ' ರಾಧಿಕಾ ಅವರ ಪಾಲಿಗೆ ಒಳ್ಳೆಯ ಅನುಭವವಾಗುವ ನಿರೀಕ್ಷೆಯಿದೆ. ಕನ್ನಡದ ಪ್ರಯೋಗಶೀಲ ಚಿತ್ರಗಳ ಹೊಸಋತುವಿಗೆ 'ಕಾಫಿ ತೋಟ'ವೂ ಸೇರ್ಪಡೆಯಾಗುವ ನಿರೀಕ್ಷೆಯಿದೆ.

'ಮತದಾನ' ಹಾಗೂ 'ಮೀರಾ ಮಾಧವ ರಾಘವ' ಚಿತ್ರಗಳ ನಂತರ ಸೀತಾರಾಮ್ ಸಿನಿಮಾದಿಂದ ದೂರ ಉಳಿದಿದ್ದರು. ಆದರೆ, ಅವರೊಳಗಿನ ನಿರ್ದೇಶಕ ಸುಮ್ಮನಿರಬೇಕಲ್ಲ. ಗೆಳೆಯರ ಬಳಗವೊಂದನ್ನು ಕಟ್ಟಿಕೊಂಡು ಅವರೀಗ ಹೊಸ ಚಿತ್ರವನ್ನು ರೂಪಿಸುತ್ತಿದ್ದಾರೆ. ಅವರಿಗೆ ತುಂಬಾ ಇಷ್ಟವಾದ ನ್ಯಾಯಾಲಯದ ಕಟಕಟೆ 'ಕಾಫಿ ತೋಟ'ದಲ್ಲೂ ಇದೆಯಂತೆ. ಈ ಚಿತ್ರದಲ್ಲಿ ರಾಧಿಕಾ ಅವರೊಂದಿಗೆ ಸಂಯುಕ್ತಾ ಹೊರನಾಡು, ಅಚ್ಯುತಕುಮಾರ್, ರಘು ಮುಖರ್ಜಿ ಮುಖ್ಯ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಮಿದುನ್ ಮುಕುಂದನ್ ಸಂಗೀತ ಹಾಗೂ ಅಶೋಕ್ ಕಶ್ಯಪ್ ಸಂಗೀತ ಚಿತ್ರಕ್ಕಿದೆ.

■ ರಘು